**CW : 8**

PW : 7

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.224/2019

ಸಾಕ್ಷಿದಾರರ ಹೆಸರು : ಷರೀಫ್

ತಂದೆಯ ಹೆಸರು : ಮೊಹಮದ್

ಪ್ರಾಯ : 50 ವರ್ಷ

ಉದ್ಯೋಗ ವ್ಯಾಪಾರ

ವಾಸಸ್ಥಳ : ಮಂಗಳೂರು

ದಿನಾಂಕ:**26.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಚಾಸಾ-1 ರವರ ಪರಿಚಯ ಇದೆ. ಚಾಸಾ-7 ಚಾಸಾ-1 ರವರ ತಮ್ಮ. ಚಾಸಾ-1 ಮೊದಲು ಆರ್ಲಪದವು ಎಂಬಲ್ಲಿ ಕಾಳುಮೆಣಸು ವ್ಯಾಪಾರ ಮಾಡುತ್ತಿದ್ದರು. ಅವರು ಹೇಗೆ ವ್ಯಾಪಾರ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. 2015 ರಲ್ಲಿ ನಾನು ಚಾಸಾ-1 ರವರ ಜೊತೆ ನನ್ನ ಸ್ವಂತ ಪಿಕಪ್ ನಲ್ಲಿ ಹೋಗಿ ಸಕಲೇಶಪುರದಿಂದ ಕಾಳುಮೆಣಸು ತಂದು ಚಾಸಾ-1 ರವರ ಗೋಡೋನ್ ನಲ್ಲಿ ಹಾಕಿದ್ದೆವು. ನಂತರ ನಾನು ನನ್ನ ಮನೆಗೆ ಚಾಸಾ-1 ಅವರ ಮನೆಗೆ ಹೋಗಿದ್ದೆವು. ಮರುದಿನ ನಾವು ತಂದಿದ್ದ ಕಾಳುಮೆಣಸು ಕಳ್ಳತನವಾದ ವಿಚಾರ ಚಾಸಾ-1 ನನಗೆ ತಿಳಿಸಿದರು. ಎಷ್ಟು ಮೌಲ್ಯದ ಎಷ್ಟು ಕೆಜಿ ಕಾಳುಮೆಣಸು ಕಳ್ಳತನವಾಗಿತ್ತೆಂದು ಗೊತ್ತಿಲ್ಲ, ಕಳ್ತನದ ಬಗ್ಗೆ ಚಾಸಾ-1 ದೂರು ಕೊಟ್ಟಿದ್ದಾರೆ. ಕಳ್ಳತನ ಯಾರು ಮಾಡಿದರು ಎಂದು ನನಗೆ ಗೊತ್ತಿಲ್ಲ. ಅವರಿಗೆ ಕಾಳುಮೆಣಸು ಸಿಕ್ಕಿತೋ ಇಲ್ಲವೋ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಈ ಮೊದಲು ನೋಡಿಲ್ಲ. ಪೊಲೀಸರು ಈ ಬಗ್ಗೆ ಒಂದು ಬಾರಿ ನನ್ನನ್ನು ವಿಚಾರಣೆ ಮಾಡಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ.ಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು, ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದ್ರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**CW : 8**

PW : 7

<u>ಪಾಟೀ ಸವಾಲುಃ ಮಾನ್ಯ ಸ ಅ ಅ ರಿಂದಃ</u>

ದಿ.24-9-2017 ಸಕಲೇಶಪುರದಿಂದ ನಾವು 990 ಕೆ ಜಿ ಕಾಳುಮೆಣಸನ್ನು ತಂದಿದ್ದೆವು ಎಂದರೆ ಸರಿ. ಮರುದಿನ ಬೆ.7.30 ರ ಸಮಯದಲ್ಲಿ 990 ಕೆಜಿ ಕಾಳುಮೆಣಸು ಅದರ ಮೌಲ್ಯ 3,30,000/- ಕಳ್ಳತನವಾಯಿತೆಂದು ಚಾಸಾ-1 ನನಗೆ ತಿಳಿಸಿದರು. ಅದರ ಮೌಲ್ಯ ನನಗೆ ಗೊತ್ತಿಲ್ಲ.

1 ರಿಂದ 6 ಜನ ಆರೋಪಿತರನ್ನು ದಿ.13.10.2017 ರಂದು ಹಾಗೂ ಅವರಿಂದ ವಶಪಡಿಸಿಕೊಂಡು 851 ಕೆಜಿ ಕಾಳುಮೆಣಸನ್ನು ಪೊಲೀಸರು ಠಾಣೆಯಲ್ಲಿ ತೋರಿಸಿದ್ದಾರೆ ಎಂದರೆ ಸರಿಯಲ್ಲ. ದಿ.1-11-2017 ರಂದು 7 ಮತ್ತು 8 ನೇ ಆರೋಪಿತರನ್ನು ಪೊಲೀಸರು ಠಾಣೆಯಲ್ಲಿ ತೋರಿಸಿದ್ದು ಅವರು 139 ಕೆಜಿ ಕಾಳುಮೆಣಸನ್ನು ಮಾರಾಟ ಮಾಡಿ ಬಂದ ಹಣವನ್ನು ಖರ್ಚು ಮಾಡಿಕೊಂಡ ಬಗ್ಗೆ ಹಾಗೂ ಕೃತ್ಯಕ್ಕೆ ಬಳಸಿದ 3 ವಾಹನಗಳನ್ನು ಹಾಗೂ ಪಿಕಾಸನ್ನು ನನಗೆ ತೋರಿಸಿದ ಬಗ್ಗೆ ನನಗೆ ಈಗ ಓದಿ ಹೇಳಿದಂತೆ " 25-9-2018 ರಂದು ಪಾಣಾಜೆ ಗ್ರಾಮದ ಆರ್ಲಪದವು ---- ಸೊತ್ತು ನೋಡಿದ್ದು ಮುಂದಕ್ಕೆ ನೋಡಿದರೆ ಗುರುತಿಸಬಲ್ಲೆ" ಎಂದು ನಾನು ಮರುಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರುಹೇಳಿಕೆಯನ್ನು ನಿಪಿ-17 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿದ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಆರೋಪಿತರನ್ನು ಪೊಲೀಸರು ನನಗೆ ತೋರಿಸಿದ್ದರೂ ಕೂಡಾ ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಿರ್ದಿಷ್ಟವಾಗಿ ಇಷ್ಟೇ ತೂಕದ ಕಾಳುಮೆಣಸು ಎಂದು ನನಗೆ ಹೇಳಲಾಗುವುದಿಲ್ಲ. ಕಾಳುಮೆಣಸಿಗೆ ಸಂಬಂಧಿಸಿದಂತೆ ಚಾಸಾ-1 ರವರು ಬಿಲ್ಲನ್ನು ನನ್ನ ಸಮಕ್ಷಮ ಪಡೆದಿಲ್ಲ. ಚಾಸಾ-1 ರವರ ಅಂಗಡಿಯನ್ನು ಕಳೆದು ಎಷ್ಟು ದೂರು ಅಂಗಡಿಯಿದೆ ಎಂದು ಹೇಳಲಾಗುವುದಿಲ್ಲ.

ಪೊಲೀಸರು ನನ್ನ ಹೇಳಿಕೆ ಮತ್ತು ಮರುಹೇಳಿಕೆಯನ್ನು ನನ್ನ ಸಮಕ್ಷಮ ಟೈಪ್ ಮಾಡಿಲ್ಲ. ನಿಪಿ-6 ರಲ್ಲಿ ಕಾಣುವ ಅಂಗಡಿ ಚಾಸಾ-1 ರವರಿಗೆ ಸೇರಿತ್ತು ಎನ್ನುವ ಬಗ್ಗೆ ಯಾವುದೇ ಕುರುಹುಗಳು ಕಂಡುಬರುವುದಿಲ್ಲ ಎಂದರೆ ಸರಿ. ನಾನು ಚಾಸಾ-1 ರವರ ಜೊತೆ ಹೋಗಿ ನನ್ನ ಪಿಕಪ್ ವಾಹನದಲ್ಲಿ

**CW : 8**

PW : 7

ಸಕಲೇಶಪುರದಿಂದ 990 ಕೆಜಿ ಕಾಳುಮೆಣಸನ್ನು ತಂದಿಲ್ಲ ಮತ್ತು ಆ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.